

## ಪರಿಣೀತಿ ಹೊಸ ಕಥೆ

ಬಿಗ್ ಬಿ ಜೊತೆ ನಟಿಸುವ ಭಾಗ್ಯ ಸಿಕ್ಕರೆ ಯಾವ ಕಲಾವಿದ ತಾನೆ ಬೇಡವೆನ್ನುತ್ತಾರೆ? 'ಅಮೃತಧಾರೆ' ಚಿತ್ರದ ಒಂದೇ ದೃಶ್ಯದಲ್ಲಿ ಅಮಿತಾಭ್ ಜೊತೆ ತೆರೆ ಹಂಚಿಕೊಂಡ ನಟಿ ರಮ್ಯಾ ಪುಳಕಿತರಾಗಿ ಆ ಖುಷಿಯನ್ನು ತಿಂಗಳುಗಟ್ಟಲೆ ಹೇಳಿಕೊಂಡಿದ್ದರು. ಹಿಂದಿ ಚಿತ್ರರಂಗದಲ್ಲೂ ಇಂಥ ಅವಕಾಶ ಎಲ್ಲರಿಗೂ ಸಿಗಲಾರದು. ವಯಸ್ಸು ಮಾಗಿದ್ದರೂ ಬಿಗ್ ಬಿ ಇಂದಿಗೂ ಸೂಪರ್‌ಸ್ಟಾರ್. ಅಂಥ ಆಂಗ್ರಿಮ್ಯಾನ್ ಜೊತೆ ನಟಿಸುವ ಅವಕಾಶವನ್ನು ಒಲ್ಲೆ ಎಂದು ಅಚ್ಚರಿ ಮೂಡಿಸಿದ್ದಾರೆ ವಿಶ್ವಸುಂದರಿ ಪ್ರಿಯಾಂಕಾ ಚೋಪ್ರಾರ ತಂಗಿ ಪರಿಣೀತಿ ಚೋಪ್ರಾ.

ಶೂಜಿತ್ ಸಿರ್ಕಾರ್ ನಿರ್ದೇಶನದ 'ಪಿಕು'ನಲ್ಲಿ ಬಿಗ್ ಬಿ ಮಗಳಾಗಿ ಪರಿಣೀತಿ ನಟಿಸಬೇಕಿತ್ತು. 'ಪಿಕು' ಅಪ್ಪ– ಮಗಳ ಬಾಂಧವ್ಯದ ಕುರಿತಾದ ಚಿತ್ರ. ಬಿ ಟೌನಿನ ನಾಯಕಿಯರೆಲ್ಲಾ ಅಮಿತಾಭ್ ಜೊತೆ ನಟಿಸಲು ಕನಸು ಕಾಣುತ್ತಿರುವಾಗ ಒಲಿದು ಬಂದ ಅಪೂರ್ವ ಅವಕಾಶವನ್ನು ಬಿಟ್ಟಿದ್ದು ಏಕೆ? ಎಂದು ಕೇಳಿದರೆ, ಪರಿಣೀತಿ 'ಅಮಿತಾಭ್ ಜೊತೆ ನಟಿಸದಿರಲು ಯಾರಿಗೆ ತಾನೆ ಇಷ್ಟವಿಲ್ಲ. ಆದರೆ ನನ್ನ ದುರದೃಷ್ಟ, ನಾನು ಬಹಳ ಹಿಂದೆಯೇ ಒಪ್ಪಿಕೊಂಡಿರುವ ಮುಖ್ಯವಾದ ಪ್ರಾಜೆಕ್ಟ್‌ಗೆ ನೀಡಿರುವ ದಿನಾಂಕ ಮತ್ತು ಶೂಜಿತ್ ಅವರ ಚಿತ್ರೀಕರಣದ ದಿನಾಂಕಗಳು ಒಂದೇ ಸಮಯಕ್ಕೆ ಬಂದಿವೆ. ಹೀಗಾಗಿ ಬಿಗ್ ಬಿ ಜೊತೆ ಬಣ್ಣ ಹಚ್ಚುವ ಅಪರೂಪದ ಅವಕಾಶವನ್ನು ಕೈಚೆಲ್ಲುವ ಅನಿವಾರ್ಯತೆ ಉಂಟಾಗಿದೆ. ಆದರೆ ಇಂಥ ಅವಕಾಶ ಮತ್ತೆ ಶೀಘ್ರದಲ್ಲೇ ಬರಲಿದೆ ಎಂಬ ವಿಶ್ವಾಸವಿದೆ' ಎಂದಿದ್ದಾರೆ.

ನಿರ್ದೇಶಕ ಶೂಜಿತ್ ಸಿರ್ಕಾರ್ 'ಪಿಕು'ಗಾಗಿ ಇರ್ಫಾನ್ ಖಾನ್, ಅಮಿತಾಭ್ ಮತ್ತು ಪರಿಣೀತಿಯ ಕಾಲ್‌ಶೀಟ್‌ಗಳನ್ನು ಕಷ್ಟಪಟ್ಟು ಹೊಂದಿಸಿಕೊಂಡಿದ್ದರು. ಆದರೆ ಆರಂಭದಲ್ಲಿ ಒಪ್ಪಿಕೊಂಡಿದ್ದ ಪರಿಣೀತಿ ಏಕಾಏಕಿ ಕೈಕೊಟ್ಟದ್ದರಿಂದ ಅವರು ಕಂಗೆಟ್ಟಿದ್ದಾರೆ. '1911' ಎಂಬ ಫುಟ್‌ಬಾಲ್ ಕುರಿತ ಚಿತ್ರವನ್ನು ನಿರ್ದೇಶಿಸಲು ಹೊರಟಿದ್ದ ಶೂಜಿತ್, ಅದಕ್ಕೂ ಮೊದಲು 'ಪಿಕು'–ವನ್ನು ಶುರುಮಾಡಲು ಹೊರಟಿದ್ದರು. ಆದರೆ ಆರಂಭದಲ್ಲೇ ವಿಘ್ನ ಎದುರಾಗಿದೆ. ಪರಿಣೀತಿ ಜಾಗಕ್ಕೆ ಬೇರೊಬ್ಬ ಪ್ರತಿಭಾವಂತ ನಟಿಯನ್ನು ಕರೆತರಲು ಹುಡುಕಾಟ ಶುರು ಮಾಡಿದ್ದಾರೆ ಶೂಜಿತ್.

## ಕಲ್ಕಿ - ಹುಮಾ ದೋಸ್ತಿ

ಬಾಲಿವುಡ್‌ನ ಅಮರ ಪ್ರೇಮಿಗಳಂತಿದ್ದ ಕಲ್ಕಿ ಕೋಚಿನ್ ಮತ್ತು ಅನುರಾಗ್ ಕಶ್ಯಪ್ ಮೊನ್ನೆ ಮೊನ್ನೆಯಷ್ಟೇ ಒಬ್ಬರಿಗೊಬ್ಬರು ಬೆನ್ನುಹಾಕಿ ನಡೆದದ್ದು ಬಿ ಟೌನಿನ ಅಂಗಳದಲ್ಲಿ ಇನ್ನೂ ಬಿಸಿಬಿಸಿಯಾಗಿ ಚರ್ಚೆಯಲ್ಲಿರುವ ಸುದ್ದಿ. ಇಬ್ಬರ ಬೆಸುಗೆ ಬೇರ್ಪಡಲು ಕಾರಣವೇ ನಟಿ ಹುಮಾ ಖುರೇಷಿ ಎನ್ನುವ ಸುದ್ದಿಯದ್ದಂತೂ ಸುಡುವ ಬಿಸಿ. ಈ ಸುದ್ದಿ ಹರಡಿಸುವವರ ಮೇಲೆ ಕಿಡಿ ಕಾರಿದ್ದಾರೆ ಅನುರಾಗ್ ಕಶ್ಯಪ್. 'ಜನರು ಮನಸಿಗೆ ಬಂದಂತೆ ಕಥೆಗಳನ್ನು ಕಟ್ಟುತ್ತಿದ್ದಾರೆ. ಇಂಥ ರೂಮರ್‌ಗಳು ನನಗಾಗಲೀ, ಕಲ್ಕಿಗಾಗಲೀ ತೊಂದರೆ ಉಂಟುಮಾಡಲಾರದು. ಆದರೆ ಇದು ಹುಮಾ ಇಮೇಜಿಗೆ ದಕ್ಕೆ ತರುತ್ತಿದೆ. ಹುಮಾರನ್ನು ಗುರಿಯಾಗಿರಿಸಿಕೊಂಡು ಕಥೆಗಳನ್ನು ಸೃಷ್ಟಿಸಲಾಗುತ್ತಿದೆ' ಎಂದು ಸಿಟ್ಟಿಗೆದ್ದಿದ್ದಾರೆ. 'ದೇವ್ ಡಿ' ಚಿತ್ರದ ವೇಳೆ ಛಾಯಾಗ್ರಾಹಕರು ಒಟ್ಟಿಗೆ ನಿಲ್ಲಿಸಿ ಫೋಟೊ ತೆಗೆದಿದ್ದಾರೆ. ಬಳಿಕ ಅದನ್ನು ಉದ್ದೇಶಪೂರ್ವಕವಾಗಿಯೇ ಕಥೆಗಳನ್ನು ಹೆಣೆದು ಪ್ರಕಟಿಸುತ್ತಾರೆ. ಇಲ್ಲಿಯೂ ಅದೇ ನಡೆದಿದೆ ಎಂದು ಮಾಧ್ಯಮಗಳ ಮೇಲೆ ಹರಿಹಾಯ್ದಿದ್ದಾರೆ ಅನುರಾಗ್.

ಇಷ್ಟೆಲ್ಲಾ ಆದ ಬಳಿಕವೂ ಮಾಧ್ಯಮಗಳಿಗೆ ಶಾಕ್ ನೀಡಿರುವುದು ಕಲ್ಕಿ ಮತ್ತು ಹುಮಾ. ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕಲ್ಕಿ ಮತ್ತು ಹುಮಾ ಖುರೇಷಿ ಒಟ್ಟಿಗೆ ಕಾಣಿಸಿಕೊಂಡಿದ್ದು ಮಾತ್ರವಲ್ಲ, ತೆಕ್ಕೆಹಾಕಿಕೊಂಡು ನಿಂತು ಫೋಟೊಗಳಿಗೆ ಪೋಸು ಕೊಟ್ಟಿದ್ದಾರೆ. ಅನುರಾಗ್ ಮತ್ತು ಕಲ್ಕಿ ಇಬ್ಬರೂ ನನ್ನ ಆತ್ಮೀಯ ಸ್ನೇಹಿತರು ಎಂದಿದ್ದಾರೆ ಹುಮಾ.

■ ಅಮಿ

